**48ನೇ ದಿನ**



| ಅವಧಿ | ಸಮಯ ಹಂಚಿಕೆ | ಎರಡನೇ ತರಗತಿ | | | | | ಮೂರನೇ ತರಗತಿ | | | | |
|---|---|---|---|---|---|---|---|---|---|---|---|
| | | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸಬಹುದಾದ ಬೋಧನಾ ಕಲಿಕಾ ಸಾಮಗ್ರಿಗಳು | ನಿರ್ವಹಣೆ | ಕಲಿಕೆಯ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸಬಹುದಾದ ಬೋಧನಾ ಕಲಿಕಾ ಸಾಮಗ್ರಿಗಳು | ನಿರ್ವಹಣೆ | ಕಲಿಕೆಯ ಪ್ರಕ್ರಿಯೆ |
| **1** | **2** | **3** | **4** | **5** | **6** | **7** | **8** | **9** | **10** | **11** | **12** |
| 1ನೇ | 40 ನಿ | ಜೀವನ ವಿಜ್ಞಾನ | ದೈಹಿಕ ಶಿಕ್ಷಣ | | ಶಿಕ್ಷಕ | ಸರಳ ವ್ಯಾಯಾಮಗಳನ್ನು ಮಾಡಿಸುವರು. | ಜೀವನ ವಿಜ್ಞಾನ | ದೈಹಿಕ ಶಿಕ್ಷಣ | | | 2ನೇ ತರಗತಿಯ ಮಕ್ಕಳ ಜೊತೆಯಲ್ಲಿ 3ನೇ ತರಗತಿಯ ಮಕ್ಕಳನ್ನು ಚಟುವಟಿಕೆಯಲ್ಲಿ ತೊಡಗಿಸಿಕೊಳ್ಳುವರು. |
| 2ನೇ | 10 ನಿ | | | ಅಂಚೆ ಪತ್ರ, ಹಾಡಿನ ಚಾರ್ಟು | ಶಿಕ್ಷಕ | **<u>ಪೂರ್ವ ಸಿದ್ಧತಾ ಚಟುವಟಿಕೆ :</u>** ಅಂಚೆ ಪತ್ರ ಹಾಡು. ಮಾವನೊಡನೆ ಅಕ್ಕ ನಗುತ ಹರುಷದಿಂದ ಇರುವಳೆ ಹಬ್ಬಕ್ಕೆಂದು ನೆಪವ ಮಾಡಿ ತವರು ಮನೆಗೆ ಬರುವಳೆ?॥ ಹಾಡು ಹಾಡಿಸುವರು. | | | | ಶಿಕ್ಷಕ | **<u>ಪೂರ್ವ ಸಿದ್ಧತಾ ಚಟುವಟಿಕೆ :</u>** 2ನೇ ತರಗತಿಯ ಮಕ್ಕಳ ಜೊತೆ ಚಟುವಟಿಕೆಯಲ್ಲಿ ಭಾಗವಹಿಸುವರು. |
| | 30 ನಿ | ಕನ್ನಡ<br>ಹಾವಿನ ಹಾಡು | ಹಾಡು ಮತ್ತು ಪದ್ಯಗಳನ್ನು ಗುಂಪಿನಲ್ಲಿ ಮತ್ತು ಒಂಟಿಯಾಗಿ ಹಾಡುವುದು. | ಪಠ್ಯಪುಸ್ತಕ | ಶಿಕ್ಷಕ | **<u>ಪುನರ್ಬಲನ ಹಂತ :</u>** ಶಿಕ್ಷಕಿಯು ಭಾಷಾಭ್ಯಾಸ ಮತ್ತು ಭಾಷಾ ಚಟುವಟಿಕೆಯನ್ನು ಮಾಡುವರು. | ಕನ್ನಡ<br>ಅಕ್ಕನಿಗೊಂದು ಪತ್ರ | ಬೇರೆ ಮಕ್ಕಳ ಬರವಣಿಗೆಯನ್ನು ಓದುವುದು. | ಪಠ್ಯಪುಸ್ತಕ | ಶಿಕ್ಷಕ | ಮಕ್ಕಳು ಬರೆದ ಬರವಣಿಗೆಯನ್ನು ಅದಲು ಬದಲು ಮಾಡಿ ಹಿರೇಮಣಿ ಸಹಾಯದಿಂದ ಮಕ್ಕಳು ಓದುವರು. |
| | 5 ನಿ | | | | | ಮಕ್ಕಳಿಂದ ಈ ಚಟುವಟಿಕೆಯನ್ನು ನೋಟ್ ಪುಸ್ತಕದಲ್ಲಿ ಬರೆಯಲು ತಿಳಿಸುವರು. | | | | ಹಿರೇಮಣಿ | ಮೇಲಿನ ಚಟುವಟಿಕೆಯನ್ನು ಪರಿಶೀಲಿಸುವರು. |
| | 25 ನಿ | | | | ಹಿರೇಮಣಿ | ಹಿರೇಮಣಿ ಸಹಾಯದಿಂದ ಮಕ್ಕಳು ಮೇಲಿನ ಚಟುವಟಿಕೆಯನ್ನು ಮಾಡುವರು. | | | | ಶಿಕ್ಷಕ | **<u>ಕಲಿಕಾಂಶ :</u>** ಶಿಕ್ಷಕಿಯು ಪಾಠವನ್ನು ಸ್ವರಭಾರ ಸಹಿತ ಓದುವುದು ಮತ್ತು ಹೊಸ ಪದಗಳ ಪರಿಚಯ ಮಾಡಿಸುವರು. |
| | 10 ನಿ | | | | | ಮೇಲಿನ ಚಟುವಟಿಕೆಯನ್ನು ಪರಿಶೀಲಿಸುವರು. | | | | | ಹೊಸ ಪದಗಳ ಪರಿಚಯವನ್ನು ಕಪ್ಪುಹಲಗೆಯಲ್ಲಿ ಶಿಕ್ಷಕ ಬರೆದಿರುವುದನ್ನು ಮಕ್ಕಳಿಗೆ ಬರೆಯಲು ತಿಳಿಸುವರು. |

| ಅವಧಿ | ಸಮಯ ನಿಮಿಷ | ಎರಡನೇ ತರಗತಿ | | | | | ಮೂರನೇ ತರಗತಿ | | | | |
|---|---|---|---|---|---|---|---|---|---|---|---|
| | | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸಬಹುದಾದ ಬೋಧನಾ ಕಲಿಕಾ ಸಾಮಗ್ರಿಗಳು | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸಬಹುದಾದ ಬೋಧನಾ ಕಲಿಕಾ ಸಾಮಗ್ರಿಗಳು | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| **1** | **2** | **3** | **4** | **5** | **6** | **7** | **8** | **9** | **10** | **11** | **12** |
| 3ನೇ | 40 ನಿ | ಚಿತ್ರಕಲೆ<br>ಸಾ.ಉ.ಕಾ. | ಕತ್ತರಿಸಿದ ಚಿತ್ರಗಳನ್ನು ಸರಿಯಾದ ಕ್ರಮದಲ್ಲಿ ಜೋಡಿಸುವುದು. | ಚಿತ್ರಗಳು, ವರ್ಣದ ಕಾಗದ, ಕತ್ತರಿ, ಪತ್ರಿಕೆ, ಅಂಟು | ಶಿಕ್ಷಕ | **ಚಟುವಟಿಕೆ**<br>ಹಳೆಯ ವೃತ್ತಪತ್ರಿಕೆಗಳಲ್ಲಿ ಇರುವ ಚಿತ್ರಗಳನ್ನು (ಕುರ್ಚಿ, ಮೇಜು, ಎಲೆ, ಪ್ರಾಣಿಗಳ ಚಿತ್ರಗಳು) ಕತ್ತರಿಸುವರು. ಒಂದು ಡ್ರಾಯಿಂಗ್ ಹಾಳೆಗೆ ಅಂಟಿಸುವರು. ಇದೇ ಚಟುವಟಿಕೆಯನ್ನು ಹಿಂದಿನ ಅವಧಿಯಲ್ಲಿ ಪರಿಚಯಿಸಲಾಗಿದೆ.<br>ಪುನರಾವರ್ತನೆ ಮಾಡಿಸುವರು. | ಚಿತ್ರಕಲೆ | ಕತ್ತರಿಸಿದ ಚಿತ್ರಗಳನ್ನು ಸರಿಯಾದ ಕ್ರಮವಾಗಿ ಜೋಡಿಸುವುದು. | ಚಿತ್ರಗಳು, ವರ್ಣದ ಕಾಗದ, ಕತ್ತರಿ, ಹಳೆಯ ಪತ್ರಿಕೆ, ಅಂಟು | ಶಿಕ್ಷಕ | 2ನೇ ತರಗತಿಯ ಮಕ್ಕಳ ಜೊತೆ ಈ ತರಗತಿಯ ಮಕ್ಕಳನ್ನು ಚಟುವಟಿಕೆಯಲ್ಲಿ ತೊಡಗಿಸುವರು. |
| | 40 ನಿ | ಸಾ.ಉ.ಕಾ. | ಮನೋರಂಜನೆ ಆಟ, ಮನರಂಜನೆ ಅಲಂಕಾರಗಳಿಗೆ ಬೇಕಾಗುವ ವಸ್ತುಗಳನ್ನು ತಾನೇ ತಯಾರಿಸಲು ಸಮರ್ಥನಾಗುತ್ತಾನೆ. | ಹಳೆಯ ವೃತ್ತಪತ್ರಿಕೆಗಳು, ಚಿನ್ನಾರಿ ಬಣ್ಣದ ಕಾಗದಗಳು | ಶಿಕ್ಷಕ | ಚಿನ್ನಾರಿ ಟೋಪಿ ತಯಾರಿಸುವರು.<br><br>ವೃತ್ತ ಪತ್ರಿಕೆಯನ್ನು ಎರಡು ಸಮ ಭಾಗವಾಗಿ ಮಡಚುವುದು. ಅನಂತರ ಎರಡನೇ ಚಿತ್ರದಲ್ಲಿರುವಂತೆ ಕಾಗದವನ್ನು ಒಳಕ್ಕೆ ಮಡಚುವರು.<br>ಚಿತ್ರ ಮೂರರಲ್ಲಿರುವಂತೆ ತ್ರಿಭುಜಾ ಕೃತಿಯನ್ನು ಒಳಭಾಗಕ್ಕೆ ಮಡಚುವರು.<br>ಚಿನ್ನರ ಟೋಪಿ ಶಿಕ್ಷಕರು ಮಾಡುವ ಚಟುವಟಿಕೆ ಮಾಡಿಸುವರು. | ಸಾ.ಉ.ಕಾ. | ಮನೋರಂಜನೆ ಆಟ, ಮನರಂಜನೆ ಅಲಂಕಾರಗಳಿಗೆ ಬೇಕಾಗುವ ವಸ್ತುಗಳನ್ನು ತಾನೇ ತಯಾರಿಸಲು ಸಮರ್ಥನಾಗುತ್ತಾನೆ. | ಹಳೆಯ ವೃತ್ತಪತ್ರಿಕೆಗಳು, ಚಿನ್ನಾರಿ, ಬಣ್ಣದ ಕಾಗದಗಳು | ಶಿಕ್ಷಕ | ಎರಡನೇ ತರಗತಿಯ ಜೊತೆಯಲ್ಲಿ 3ನೇ ತರಗತಿಯ ಮಕ್ಕಳು ಚಟುವಟಿಕೆಯಲ್ಲಿ ಭಾಗವಹಿಸುವರು. |

| ಅವಧಿ | ಸಮಯ ಹಂಚಿಕೆ | ಎರಡನೇ ತರಗತಿ | | | | | ಮೂರನೇ ತರಗತಿ | | | | |
|---|---|---|---|---|---|---|---|---|---|---|---|
| | | ವಿಷಯ ಮತ್ತು ಘಟಕದ ಹೆಸರು | ಸಾಮರ್ಥ್ಯದ ವಿವರ | ಬೋಧನೋಪಕರಣ ಕಲಿಕಾ ಸಾಮಗ್ರಿಗಳು | ವಿನ್ಯಾಸ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಘಟಕದ ಹೆಸರು | ಸಾಮರ್ಥ್ಯದ ವಿವರ | ಬೋಧನೋಪಕರಣ ಕಲಿಕಾ ಸಾಮಗ್ರಿಗಳು | ವಿನ್ಯಾಸ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 1ನೇ | 10 ನಿ | ಕನ್ನಡ ಹಾಡಿನ ಹಾಡು | ಹಾಡು ಮತ್ತು ಪದ್ಯಗಳನ್ನು ಗುಂಪಿನಲ್ಲಿ ಮತ್ತು ಒಂಟಿಯಾಗಿ ಹಾಡುವರು. | ಚಾರ್ಟ್ | ಶಿಕ್ಷ | **<u>ಪೂರ್ವ ಸಿದ್ಧತಾ ಚಟುವಟಿಕೆ :</u>** ಅಂಚೆಪತ್ರ ಹಾಡು<br>ಎಲ್ಲ ಸುದ್ದಿ ಬೇಗ ನಮಗೆ<br>ದಿನವು ಹೊತ್ತು ತರುವುದು.<br>ಬರೆದುದೇನು ಒಳಗೆ ಎಂದು<br>ಅದಕೆ ಮಾತ್ರ ತಿಳಿಯದು. ಈ ಅಭಿನಯ ಗೀತೆಯನ್ನು ಹಾಡಿಸುವರು. | ಕನ್ನಡ ಹಾಡಿನ ಹಾಡು | ಬೇರೆ ಮಕ್ಕಳ ಬರವಣಿಗೆಯನ್ನು ಓದುವರು. | ಮಕ್ಕಳ ನೋಟ್ ಪುಸ್ತಕ, ಚಾರ್ಟ್ | ಶಿಕ್ಷ | **<u>ಪೂರ್ವ ಸಿದ್ಧತಾ ಚಟುವಟಿಕೆ :</u>**<br>2ನೇ ತರಗತಿಯ ಮಕ್ಕಳೊಂದಿಗೆ ಚಟುವಟಿಕೆಯಲ್ಲಿ ಭಾಗವಹಿಸುವರು. |
| | 5 ನಿ | | | | | ಮಕ್ಕಳಿಂದ ಬಾಬಾ ಗಿಳಿಯೇ ಪದ್ಯವನ್ನು ಗುಂಪಿನಿಂದ ಹಾಡಲು ಸೂಚಿಸುವರು. | | | | | ಮುಂದಿನ ಚಟುವಟಿಕೆಗೆ ಅಣಿಗೊಳ್ಳುವರು. |
| | 25 ನಿ | | | | ಹಿರೇಮಣಿ | ಹಿರೇಮಣಿ ಸಹಾಯದಿಂದ ಮಕ್ಕಳು ಗುಂಪಿನಲ್ಲಿ ಬಾಬಾಗಿಳಿಯೇ ಪದ್ಯವನ್ನು ರಾಗವಾಗಿ ಅಭಿನಯ ಪೂರ್ವಕವಾಗಿ ಹಾಡುವರು. | | | | ಶಿಕ್ಷ | **<u>ಕಲಿಕಾಂಶ ಚಟುವಟಿಕೆ :</u>** ಮಕ್ಕಳು ಬರೆದ ಬರವಣಿಗೆಯನ್ನು ಅದಲು ಬದಲು ಮಾಡಿ ಶಿಕ್ಷಕಿಯು ಒಬ್ಬೊಬ್ಬರಿಂದ ಓದಿಸುವರು. |
| | 5 ನಿ | | | | | ಮಕ್ಕಳು ಮಾಡುತ್ತಿರುವ ಚಟುವಟಿಕೆಯನ್ನು ಶಿಕ್ಷಕರು ಪರಿಶೀಲಿಸುವರು. | | | | | ಅಭ್ಯಾಸದ ಪ್ರಶ್ನೆಗಳಿಗೆ ಉತ್ತರಿಸಲು ತಿಳಿಸುವರು. (ಪುಟಸಂಖ್ಯೆ 25) |
| | 25 ನಿ | | | | ಶಿಕ್ಷ | **<u>ಮೌಲ್ಯಮಾಪನ ಚಟುವಟಿಕೆ :</u>** ಶಿಕ್ಷಕರು ಹಾಡನ್ನು ಅಭಿನಯ ಪೂರ್ವಕವಾಗಿ ಪ್ರತಿ ಮಗುವಿನಿಂದ ಹೇಳಿಸುವರು. | | | | ಹಿರೇಮಣಿ | ಹಿರೇಮಣಿ ಸಹಾಯದಿಂದ ಅಭ್ಯಾಸದ ಪ್ರಶ್ನೆಗಳಿಗೆ ಉತ್ತರಿಸುವರು. |
| | 10 ನಿ | | | | | ಮಕ್ಕಳಿಂದ ಬಾಬಾ ಗಿಳಿಯೇ ಪದ್ಯವನ್ನು ಹಾಡಲು ತಿಳಿಸುವರು. | | | | | ಮೇಲಿನ ಚಟುವಟಿಕೆಯನ್ನು ಪರಿಶೀಲಿಸುವರು. |
| 2ನೇ | 10 ನಿ | ಗಣಿತ - ಸಂಖ್ಯೆಗಳು | ಎಣಿಸುವ ಮೂಲಕ ಸರಿಸಂಖ್ಯೆ, ಬೆಸಸಂಖ್ಯೆಗಳನ್ನು ಅರ್ಥಮಾಡಿಕೊಳ್ಳುವರು. | ಹುಣಸೆಬೀಜ, ಕಡ್ಡಿಗಳು, ಕ.ಹಲಗೆ, ಮಕ್ಕಳು, ಖಾಲಿ ಬೆಂಕಿಪೊಟ್ಟಣ, ಫಲಕಾಲ್,ಕ್ಯಾಲೆಂಡರ್ | ಶಿಕ್ಷ | **<u>ಪೂರ್ವ ಸಿದ್ಧತಾ ಚಟುವಟಿಕೆ :</u>** ಮಕ್ಕಳನ್ನು ವೃತ್ತಾಕಾರವಾಗಿ ನಿಲ್ಲಿಸಿ ಚಲಿಸಲು ಹೇಳುವರು. ಶಿಕ್ಷಕರು ಹೇಳಿದ ಸಂಖ್ಯೆಯಷ್ಟು ಮಕ್ಕಳು ಗುಂಪು ಗೂಡುವಂತೆ ಹೇಳುವರು. ಗುಂಪಿನಲ್ಲಿರದ ಮಗು ಮತ್ತು ಶಿಕ್ಷಕರು ಹೇಳಿದ ಸಂಖ್ಯೆಗಿಂತ ಹೆಚ್ಚು ಅಥವಾ ಕಡಿಮೆ ಗುಂಪು ಗೂಡಿದ ಮಕ್ಕಳು (out) ಹೊರ ಹೋಗುವರು. ಈ ಚಟುವಟಿಕೆಯನ್ನು ಮಾಡಿಸುವರು. | ಗಣಿತ - ಸಂಖ್ಯೆಗಳು | * ಮೊತ್ತವು 999ಕ್ಕೆ ಮೀರದಂತೆ ದಶಕವಿಲ್ಲದ ಹಾಗೂ ದಶಕವಿರುವ ಹಾಗೆ ಮೂರು ಅಂಕಿಗಳುಳ್ಳ ಅಥವಾ ಮೂರು ಸಂಖ್ಯೆಗಳ ಸಂಕಲನ ಮಾಡುವರು.<br>* ಎತ್ತಿಬರದಲ್ಲಿ ಸರಳ ಸಂಕಲನದ ಸಮಸ್ಯೆಗಳನ್ನು ಬಿಡಿಸುವರು. | ಕಡ್ಡಿಗಳು, ಗೋಲಿಗಳು, ಕ.ಹಲಗೆ, ಸಂಖ್ಯಾಫಲಕಗಳು. | ಶಿಕ್ಷ | **<u>ಪೂರ್ವ ಸಿದ್ಧತಾ ಚಟುವಟಿಕೆ :</u>** ಎರಡನೇ ತರಗತಿಯ ಮಕ್ಕಳ ಜೊತೆಯಲ್ಲಿ ಮೂರನೇ ತರಗತಿಯ ಮಕ್ಕಳನ್ನು ಚಟುವಟಿಕೆಯಲ್ಲಿ ತೊಡಗಿಸುವರು. |
| | 5 ನಿ | | | | | ಹಿಂದಿನ ಗಣಿತದ ಅವಧಿಯ ಚಟುವಟಿಕೆಯನ್ನು ಮುಂದುವರೆಸಿಕೊಂಡು ಹೋಗಲು ಹಿರೇಮಣಿಗೆ ಸೂಚನೆ ನೀಡುವರು. | | | | | ಮಕ್ಕಳು ಮುಂದಿನ ಚಟುವಟಿಕೆಗೆ ಅಣಿಯಾಗುವರು. |
| | 25 ನಿ | | | | ಹಿರೇಮಣಿ | ಹಿಂದಿನ ಗಣಿತ ಅವಧಿಯ ಚಟುವಟಿಕೆಯನ್ನು ಮುಂದುವರೆಸಿ ಲೆಕ್ಕಗಳನ್ನು ಮಾಡಿಸುವರು. | | | | ಶಿಕ್ಷ | **<u>ಪುನರ್ಬಲನ ಚಟುವಟಿಕೆ :</u>** ಪ.ಪು. ಪುಟಸಂಖ್ಯೆ ರಲ್ಲಿನ ವಿಸ್ತರಿಸಿ ಬರೆದು ಸಂಕಲನ ಮಾಡು ಲೆಕ್ಕಗಳನ್ನು ಮಾಡಿಸುವುದು. ಚಟುವಟಿಕೆ ಮೂಲಕ<br>234 = 2 ನೂರುಗಳು + 3 ಹತ್ತುಗಳು + 4 ಬಿಡಿಗಳು<br>655 = 6 ನೂರುಗಳು + 5 ಹತ್ತುಗಳು + 5 ಬಿಡಿಗಳು<br>889 = 8 ನೂರುಗಳು + 8 ಹತ್ತುಗಳು + 9 ಬಿಡಿಗಳು |
| | 10 ನಿ | | | | | ಮಕ್ಕಳು ಮುಂದಿನ ಚಟುವಟಿಕೆಗೆ ಅಣಿಯಾಗುವರು. | | | | | ಮೇಲಿನ ಚಟುವಟಿಕೆಯನ್ನು ಮುಂದುವರಿಸಲು ಹಿರೇಮಣಿಗೆ ಸೂಚನೆ ನೀಡುವರು. |
| | 25 ನಿ | | | | ಶಿಕ್ಷ | **<u>ಪುನರ್ಬಲನ ಚಟುವಟಿಕೆ :</u>** ಪ.ಪು. ಪುಟಸಂಖ್ಯೆ 60,61,62 ಮತ್ತು 63ರ ಚಟುವಟಿಕೆಗಳನ್ನು ಮಾಡಿಸುವರು. | | | | ಹಿರೇಮಣಿ | ಮೇಲಿನ ಚಟುವಟಿಕೆಯನ್ನು ಮುಂದುವರೆಸಿಕೊಂಡು ಹೋಗುವರು. |
| | 5 ನಿ | | | | | ಮೇಲಿನ ಚಟುವಟಿಕೆಯನ್ನು ಮುಂದುವರೆಸುವರು. | | | | | ಮೇಲಿನ ಚಟುವಟಿಕೆಯನ್ನು ಪರಿಶೀಲನೆ ಮಾಡುವರು. |

| ಅವಧಿ | ಸಮಯ ಹಂಚಿಕೆ | ಎರಡನೇ ತರಗತಿ | | | | | ಮೂರನೇ ತರಗತಿ | | | | |
|---|---|---|---|---|---|---|---|---|---|---|---|
| | | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸಬಹುದಾದ ಬೋಧನಾ ಕಲಿಕಾ ಸಾಮಗ್ರಿಗಳು | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸಬಹುದಾದ ಬೋಧನಾ ಕಲಿಕಾ ಸಾಮಗ್ರಿಗಳು | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 3ನೇ | 40 ನಿಮಿಷ | ಆಲಿಕೆ | ಮಕ್ಕಳಲ್ಲಿ ಸೃಜನಾತ್ಮಕ ಮತ್ತು ಭಾವನಾತ್ಮಕ ಕಲೆಯನ್ನು ಪ್ರೋತ್ಸಾಹಿಸುವುದು. | ಚಾರ್ಟ್ | ಶಿಕ್ಷಕ | ಶಿಕ್ಷಕರು ಹೇಳಿದ ಕಥೆಯನ್ನು ಮಕ್ಕಳು ಪುನರಾವರ್ತನೆ ಮಾಡುವರು.<br>* ಆಮೆ ಮತ್ತು ಮೊಲದ ಕಥೆ. | ಆಲಿಕೆ | ಮಕ್ಕಳಲ್ಲಿ ಸೃಜನಾತ್ಮಕ ಮತ್ತು ಭಾವನಾತ್ಮಕ ಕಲೆಯನ್ನು ಪ್ರೋತ್ಸಾಹಿಸುವುದು. | | ಶಿಕ್ಷಕ | ಶಿಕ್ಷಕರು ಹೇಳಿದ ಕಥೆಯನ್ನು ಮಕ್ಕಳು ಪುನರಾವರ್ತನೆ ಮಾಡುವರು.<br>* ಆಮೆ ಮತ್ತು ಮೊಲದ ಕಥೆ. |
| | 40 ನಿಮಿಷ | ರೇಡಿಯೋ ಕಾರ್ಯಕ್ರಮ ಚಿನ್ನರ ಚುಕ್ಕಿ | | ರೇಡಿಯೋ [illegible] | ಶಿಕ್ಷಕ | ಚಿನ್ನರ ಚುಕ್ಕಿ ರೇಡಿಯೋ ಕಾರ್ಯಕ್ರಮ | ಚಿನ್ನರ ಚುಕ್ಕಿ | | ರೇಡಿಯೋ [illegible] | ಶಿಕ್ಷಕ | ಚಿನ್ನರ ಚುಕ್ಕಿ ರೇಡಿಯೋ ಕಾರ್ಯಕ್ರಮ |
| 4ನೇ | 10 ನಿ | ಪರಿಸರ ಅಧ್ಯಯನ ನಮ್ಮ ದೇಹದ ಭಾಗಗಳು | ದೇಹದ ಅಂಗಗಳನ್ನು ಗುರುತಿಸುವರು ಮತ್ತು ಅವುಗಳ ಕೆಲಸವನ್ನು ತಿಳಿಯುವರು. | ಪ್ರಶ್ನೆಗಳ ಕಾರ್ಡುಗಳು, ಚಿತ್ರಗಳು | ಶಿಕ್ಷಕ | **<u>ಪೂರ್ವ ಸಿದ್ಧತಾ ಚಟುವಟಿಕೆ :</u>**<br>ಹಕ್ಕಿ ಚಿಲಿಪಿಲಿ ಗಿಲ್ಕಿ ಗಿಲಿ ಗಿಲಿ ಅಭಿನಯ ಗೀತೆಯನ್ನು ಹೇಳಿಕೊಡುವರು. (ಚಿಗುರು, ಧ್ವನಿ ಸುರುಳಿಯಲ್ಲಿದೆ) | ಪರಿಸರ ಅಧ್ಯಯನ ನಮ್ಮ ದೇಹದ ಭಾಗಗಳು | * ವಿವಿಧ ರೀತಿಯ ಹಲ್ಲುಗಳನ್ನು ಗುರುತಿಸುವರು.<br>* ಹಲ್ಲುಗಳ ಕಾರ್ಯ, ಸ್ವಚ್ಛತೆ ಮತ್ತು ರಕ್ಷಣೆಯ ವಿಧಾನಗಳನ್ನು ಅರಿಯುವರು. | ಪ್ರಶ್ನೆಗಳ ಕಾರ್ಡುಗಳು, ಚಿತ್ರಗಳು | ಶಿಕ್ಷಕ | **<u>ಪೂರ್ವ ಸಿದ್ಧತಾ ಚಟುವಟಿಕೆ :</u>**<br>ಎರಡನೇ ತರಗತಿ ಮಕ್ಕಳ ಜೊತೆ ಮೂರನೇ ತರಗತಿಯ ಮಕ್ಕಳನ್ನು ಚಟುವಟಿಕೆಯಲ್ಲಿ ತೊಡಗಿಸುವರು. |
| | 5 ನಿ | | | | | ಮಕ್ಕಳು ಮುಂದಿನ ಪಾಠಕ್ಕೆ ಸಿದ್ಧತೆ ಮಾಡಿಕೊಳ್ಳುವರು. | | | | | ಮುಂದಿನ ಚಟುವಟಿಕೆಗೆ ಸೂಚನೆ ಕೊಡುವರು. |
| | 25 ನಿ | | | | ಶಿಕ್ಷಕ | **<u>ಮೌಲ್ಯಮಾಪನ ಚಟುವಟಿಕೆ :</u>** ನಿನ್ನ ಹೆಸರನ್ನು ಬರೆಯಲು ಉಪಯೋಗಿಸುವ ಬೆರಳುಗಳು ಯಾವುವು? ಹಾವು ಹೇಗೆ ಚಲಿಸುತ್ತದೆ? ಹೀಗೆ ಇನ್ನೂ ಕೆಲವು ಪ್ರಶ್ನೆಗಳನ್ನು ಸಿದ್ಧಪಡಿಸಿಕೊಂಡು ಮೌಲ್ಯಮಾಪನ ಮಾಡುವರು. | | | | ಹಿರೇಮಣಿ | ಪು. ಸಂಖ್ಯೆ 46ರಲ್ಲಿರುವ ಇವುಗಳ ಚಿತ್ರಬರೆ. ಚಟುವಟಿಕೆ ಮಾಡುವರು. |
| | 10 ನಿ | | | | | ಮುಂದಿನ ಚಟುವಟಿಕೆಗೆ ಹಿರೇಮಣಿಗೆ ಸೂಚನೆ ನೀಡುವರು. | | | | | ಮಕ್ಕಳು ಮುಂದಿನ ಪಾಠಕ್ಕೆ ಸಿದ್ಧತೆ ಮಾಡಿಕೊಳ್ಳುವರು. |
| | 25 ನಿ | | | | ಹಿರೇಮಣಿ | ಕೈಕಾಲುಗಳಿಗೆ ಸಹಾಯಕವಾದ ಸುಲಭ ವ್ಯಾಯಾಮವನ್ನು ಹೀರೇಮಣಿಯು ಮಾಡಿಸುವುದು. | | | | ಶಿಕ್ಷಕ | **<u>ಮೌಲ್ಯಮಾಪನ ಚಟುವಟಿಕೆ :</u>** ಮನುಷ್ಯನಿಗೆ ಎಷ್ಟುಬಾರಿ ಹಲ್ಲುಗಳು ಹುಟ್ಟುತ್ತವೆ?<br>ಈ ರೀತಿಯ ಮೌಲ್ಯಮಾಪನ ಪ್ರಶ್ನೆಗಳನ್ನು ತಯಾರಿಸಿಕೊಂಡು ಪ್ರಶ್ನೆಗಳನ್ನು ಕೇಳಿ ಉತ್ತರ ಪಡೆಯುವರು. |
| | 5 ನಿ | | | | | ಈ ರೀತಿಯ ವ್ಯಾಯಾಮ ಮಾಡುವುದರಿಂದ ಯಾವ ರೀತಿಯ ಅನುಕೂಲ ಗಳಾಗುತ್ತವೆ ಪಟ್ಟಿ ಮಾಡಿಸುವರು. | | | | | ಮೌಲ್ಯಮಾಪನ ಚಟುವಟಿಕೆಯಲ್ಲಿನ ಪ್ರಶ್ನೆಗಳಿಗೆ ಉತ್ತರ ಬರೆಸುವರು. |

| ಅವಧಿ | ಸಮಯ ಹಂಚಿಕೆ | ಎರಡನೇ ತರಗತಿ: ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸಬಹುದಾದ ಬೋಧನಾ ಕಲಿಕಾ ಸಾಮಗ್ರಿಗಳು | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ಮೂರನೇ ತರಗತಿ: ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸಬಹುದಾದ ಬೋಧನಾ ಕಲಿಕಾ ಸಾಮಗ್ರಿಗಳು | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
|---|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 1ನೇ | 10 ನಿ | ಕನ್ನಡ<br>ಹಾವಿನ ಹಾಡು | ಹಾಡು ಮತ್ತು ಪದ್ಯಗಳನ್ನು ಗುಂಪಿನಲ್ಲಿ ಮತ್ತು ಒಂಟಿಯಾಗಿ ಹಾಡುವುದು. | ಕಾಲ್ಚೀಲ, ಬಣ್ಣ, ಪೆನ್ಸಿಲ್, ಬಟ್ಟೆ. | ಶಿಕ್ಷಕ | **<u>ಪೂರ್ವ ಸಿದ್ಧತಾ ಚಟುವಟಿಕೆ :</u>** ಅಂಚೆ ಪತ್ರ ಹಾಡನ್ನು ಪೂರ್ತಿಯಾಗಿ ಹಾಡಿಸುವರು. | ಕನ್ನಡ<br>ಅಕ್ಕನಿಗೊಂದು ಪತ್ರ | ಬೇರೆ ಮಕ್ಕಳ ಬರವಣಿಗೆಯನ್ನು ಓದುವುದು. | ಪ್ರಾಸಪದಗಳ, ಮಿಂಚು ಪಟ್ಟಿಗಳು | ಶಿಕ್ಷಕ | **<u>ಪೂರ್ವ ಸಿದ್ಧತಾ ಚಟುವಟಿಕೆ :</u>** ಅಂಚೆ ಪತ್ರ ಹಾಡನ್ನು ಪೂರ್ತಿಯಾಗಿ ಹಾಡಿಸುವರು. 2ನೇ ತರಗತಿ ಮಕ್ಕಳೊಡನೆ ಈ ಮಕ್ಕಳು ಚಟುವಟಿಕೆಯಲ್ಲಿ ಭಾಗವಹಿಸುವರು. |
| | 15 ನಿ | | | | | ಮುಂದಿನ ಪಾಠಕ್ಕೆ ಅಣಿಗೊಳಿಸುವರು 2 ಮತ್ತು 3ನೇ ತರಗತಿಯವರನ್ನು ಒಟ್ಟಿಗೆ ಕುಳ್ಳಿರಿಸಿ ಹಾವಿನ ಹಾಡು ಪದ್ಯಕ್ಕೆ ಅಭಿನಯವಾಗಿ ಗೊಂಬೆಯಾಟವನ್ನು ಮಾಡುವುದಕ್ಕೆ ಅಣಿಗೊಳಿಸುವರು. | | | | | ಮುಂದಿನ ಪಾಠಕ್ಕೆ ಅಣಿಯಾಗುವುದು.<br>2ನೇ ತರಗತಿಯೊಂದಿಗೆ ಚಟುವಟಿಕೆಯಲ್ಲಿ ಭಾಗವಹಿಸುವರು. |
| | 30 ನಿ | | | | ಶಿಕ್ಷಕ | **<u>ಮೌಲ್ಯಮಾಪನ ಚಟುವಟಿಕೆ :</u>**<br>ಕಾಲ್ಚೀಲವನ್ನು ಕೈಯಿಗೆ ಹಾಕಿ, ಕಾಲ್ಚೀಲದಲ್ಲಿ ಮೊದಲೇ ಹಾವಿನ ಚಿತ್ರಣವನ್ನು ಬಿಡಿಸಿರಬೇಕು. ಮಕ್ಕಳಿಂದ ಸಾಮೂಹಿಕವಾಗಿ ಹಾಡನ್ನು ಹಾಡಿಸುತ್ತ ಶಿಕ್ಷಕರು ಪರದೆಯ ಮೇಲೆ ಹಾವಿನ ಚಲನವಲನವನ್ನು ತೋರಿಸುವರು. ಮತ್ತೆ ಮಕ್ಕಳಿಂದ ಮಾಡಿಸುವರು. | | | | ಶಿಕ್ಷಕ | 3ನೇ ತರಗತಿಯ ಮಕ್ಕಳು ಕೂಡಾ 2ನೇ ತರಗತಿಯವರೊಂದಿಗೆ ಚಟುವಟಿಕೆಯಲ್ಲಿ ಅತ್ಯಂತ ಉತ್ಸುಕರಾಗಿ ಭಾಗವಹಿಸುವಂತೆ ಮಾಡುವರು. |
| | 15 ನಿ | | | | | ಹಾವಿನ ಹಾಡು ಪದ್ಯದಿಂದ ಹೊಸ ಪದಗಳನ್ನು ಬರೆಯಿಸುವರು. | | | | | ಪ್ರಾಸಪದಗಳ ಮಿಂಚುಪಟ್ಟಿಗಳನ್ನು ಮಕ್ಕಳಿಗೆ ಕೊಟ್ಟು ಜೋಡಿಸಲು ತಿಳಿಸುವರು. |
| | 10 ನಿ | | | | | ಮೇಲಿನ ಚಟುವಟಿಕೆಯನ್ನು ಪರಿಶೀಲಿಸುವರು. | | | | | ಮೇಲಿನ ಚಟುವಟಿಕೆಯನ್ನು ಮುಂದುವರೆಸುವರು. |
| 2ನೇ | 10 ನಿ | ಗಣಿತ ಸಂಖ್ಯೆಗಳು | ಎಣಿಸುವ ಮೂಲಕ ಸರಿಸಂಖ್ಯೆ, ಬೆಸಸಂಖ್ಯೆಗಳನ್ನು ಅರ್ಥ ಮಾಡಿಕೊಳ್ಳುವುದು. | ಹುಣಸೇಬೀಜ, ಕಡ್ಡಿಗಳು, ಕ. ಹಲಗೆ, ಮಕ್ಕಳು, ಖಾಲಿ ಬೆಂಕಿಪೊಟ್ಟಣ, ಫೆವಿಕಾಲ್, ಕ್ಯಾಲೆಂಡರ್ | ಶಿಕ್ಷಕ | **<u>ಪೂರ್ವ ಸಿದ್ಧತಾ ಚಟುವಟಿಕೆ :</u>** ಹಿಂದಿನ ಗಣಿತ ಅವಧಿಯ ಪೂ.ಸಿ.ಚವನ್ನು ಪುನರಾವರ್ತನೆ ಮಾಡಿಸುವರು. | ಗಣಿತ ಸಂಖ್ಯೆಗಳು | * ಮೊತ್ತವು 999ಕ್ಕೆ ಮೀರದಂತೆ ದಶಕವಿಲ್ಲದೆ ಹಾಗೂ ದಶಕವಿರುವ ಹಾಗೆ ಮೂರು ಅಂಕೆಗಳುಳ್ಳ ಅಥವಾ ಮೂರು ಸಂಖ್ಯೆಗಳ ಸಂಕಲನ ಮಾಡುವುದು.<br>* ನಿತ್ಯಜೀವನದಲ್ಲಿ ಸರಳ ಸಂಕಲನದ ಸಮಸ್ಯೆಗಳನ್ನು ಬಿಡಿಸುವುದು. | ಕಡ್ಡಿಗಳು, ಗೋಲಿಗಳು, ಕ. ಹಲಗೆ, ಸಂಖ್ಯಾ ಫಲಕಗಳು | ಶಿಕ್ಷಕ | **<u>ಪೂರ್ವ ಸಿದ್ಧತಾ ಚಟುವಟಿಕೆ :</u>** ಎರಡನೇ ತರಗತಿಯ ಮಕ್ಕಳ ಜೊತೆಯಲ್ಲಿ ಚಟುವಟಿಕೆಯಲ್ಲಿ ತೊಡಗುವರು. |
| | 5 ನಿ | | | | | ಪು. ಸಂ. 60, 61, 62ರಲ್ಲಿನ ಚಟುವಟಿಕೆ ಮುಂದುವರಿಸಲು ಸೂಚನೆ ನೀಡುವರು. | | | | | ವಿದ್ಯಾರ್ಥಿಗಳನ್ನು ಮುಂದಿನ ಚಟುವಟಿಕೆಗಳಿಗೆ ಅಣಿಗೊಳಿಸುವುದು. |
| | 25 ನಿ | | | | ಹಿರೇಮಣಿ | ಮಕ್ಕಳು ಆ ಚಟುವಟಿಕೆಯನ್ನು ಮಾಡುವರು. | | | | | **<u>ಪೂರ್ವ ಸಿದ್ಧತಾ ಚಟುವಟಿಕೆ :</u>** ಒಂದು ಶಾಲೆಯಲ್ಲಿ 485 ಗಂಡು ಮಕ್ಕಳು ಮತ್ತು 365 ಹೆಣ್ಣು ಮಕ್ಕಳು ಓದುತ್ತಿದ್ದಾರೆ. ಆ ಶಾಲೆಯಲ್ಲಿ ಓದುತ್ತಿರುವ ಮಕ್ಕಳ ಸಂಖ್ಯೆ ಎಷ್ಟು?<br>ನೂ ಹ ಬಿ<br>ಗಂಡು ಮಕ್ಕಳ ಸಂಖ್ಯೆ - 4 8 5<br>ಹೆಣ್ಣು ಮಕ್ಕಳ ಸಂಖ್ಯೆ - 3 6 5<br>ಒಟ್ಟು ಮಕ್ಕಳ ಸಂಖ್ಯೆ - 8 5 0<br>ಈ ರೀತಿಯ ಸಂಕಲನದ ನಿತ್ಯಜೀವನಕ್ಕೆ ಸಂಬಂಧಿಸಿದ ಸಮಸ್ಯೆಗಳನ್ನು ಬಿಡಿಸುವ ಲೆಕ್ಕಗಳನ್ನು ಕೊಟ್ಟು ಮಕ್ಕಳಿಂದ ಮಾಡಿಸುವರು. |
| | 10 ನಿ | | | | | ಮೇಲಿನ ಚಟುವಟಿಕೆಗಳನ್ನು ಪರಿಶೀಲಿಸುವರು. | | | | | ಮೇಲಿನ ಚಟುವಟಿಕೆಯನ್ನು ಮುಂದುವರಿಸಲು ಸೂಚನೆ ನೀಡುವರು. |
| | 25 ನಿ | | | | ಶಿಕ್ಷಕ | **<u>ಮೌಲ್ಯಮಾಪನ ಚಟುವಟಿಕೆ :</u>**<br>ಪ.ಪು.ಪು.ಸಂ. ರಲ್ಲಿರುವಂತೆ ಸರಿ, ಬೆಸ ಆಟ ಆಡಿಸುವರು. | | | | ಸ್ವ.ಕ | ಮೇಲಿನ ಚಟುವಟಿಕೆಯಂತೆ ಸಮಸ್ಯೆಗಳನ್ನು ನೀಡಿ ಬಿಡಿಸುವ ಲೆಕ್ಕ ಮಾಡುವರು. |
| | 5 ನಿ | | | | | | | | | ಶಿ | ಮೇಲಿನ ಚಟುವಟಿಕೆಗಳನ್ನು ಪರಿಶೀಲಿಸುವರು. |

**50ನೇ ದಿನ**



| ಅವಧಿ | ಸಮಯ ಹಂಚಿಕೆ | ಎರಡನೇ ತರಗತಿ | | | | | ಮೂರನೇ ತರಗತಿ | | | | |
|---|---|---|---|---|---|---|---|---|---|---|---|
| | | ವಿಷಯ ಮತ್ತು ಕಲಿಕಾ ಕ್ಷೇತ್ರ | ಸಾಮರ್ಥ್ಯದ ವಿವರ | ಬಳಸಬಹುದಾದ ಬೋಧನಾ ಕಲಿಕಾ ಸಾಮಗ್ರಿಗಳು | ವಿಧಾನ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಕಲಿಕಾ ಕ್ಷೇತ್ರ | ಸಾಮರ್ಥ್ಯದ ವಿವರ | ಬಳಸಬಹುದಾದ ಬೋಧನಾ ಕಲಿಕಾ ಸಾಮಗ್ರಿಗಳು | ವಿಧಾನ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 3ನೇ | 40 ನಿಮಿಷ | ಜೀವನ ಮೌಲ್ಯ | ಮಕ್ಕಳಲ್ಲಿ ಮೌಲ್ಯಗಳನ್ನು ಬೆಳೆಸುವುದು. | ನೀತಿಯನ್ನು ಸಾರುವ ಕಥೆಗಳ ಸಂಗ್ರಹ | ಶಿಕ್ಷಕ | **<u>ಪ್ರಾಮಾಣಿಕತೆ :</u>** ಮೂರು ಕೊಡಲಿಗಳು ಕಥೆಯನ್ನು ಹೇಳಿ ರಂಗಪ್ಪನ ಪ್ರಾಮಾಣಿಕತೆಯನ್ನು ಮೆಚ್ಚುವಂತೆ ಮಾಡುವುದು, ಹಾಗೂ ಈ ರೀತಿಯ ಮೌಲ್ಯಗಳನ್ನು ಸಾರುವ ನೀತಿಕಥೆಗಳನ್ನು ಮಕ್ಕಳಿಗೆ ಹೇಳುವರು. | ಜೀವನ ಮೌಲ್ಯ | ಮಕ್ಕಳಲ್ಲಿ ಮೌಲ್ಯಗಳನ್ನು ಬೆಳೆಸುವುದು. | ನೀತಿಯನ್ನು ಸಾರುವ ಕಥೆಗಳ ಸಂಗ್ರಹ | ಶಿಕ್ಷಕ | **<u>ಪ್ರಾಮಾಣಿಕತೆ :</u>** ಮೂರು ಕೊಡಲಿಗಳು ಕಥೆಯನ್ನು ಹೇಳಿ ರಂಗಪ್ಪನ ಪ್ರಾಮಾಣಿಕತೆಯನ್ನು ಮೆಚ್ಚುವಂತೆ ಮಾಡುವುದು. ಹಾಗೂ ಈ ರೀತಿಯ ಮೌಲ್ಯಗಳನ್ನು ಸಾರುವ ನೀತಿಕಥೆಗಳನ್ನು ಮಕ್ಕಳಿಗೆ ಹೇಳುವರು. |
| | 40 | ಚಿನ್ನರ ಚುಕ್ಕಿ | | ರೇಡಿಯೋ, ಕಪ್ಪು ಹಲಗೆ, ಸೀಮೆಸುಣ್ಣ | ಶಿಕ್ಷಕ | ಚಿನ್ನರ ಚುಕ್ಕಿ ರೇಡಿಯೋ ಕಾರ್ಯಕ್ರಮ. | ಚಿನ್ನರ ಚುಕ್ಕಿ | | ರೇಡಿಯೋ, ಕಪ್ಪು ಹಲಗೆ, ಸೀಮೆಸುಣ್ಣ | ಶಿಕ್ಷಕ | ಚಿನ್ನರ ಚುಕ್ಕಿ ರೇಡಿಯೋ ಕಾರ್ಯಕ್ರಮ. |
| 4ನೇ | 10 ನಿ | ಪರಿಸರ ಅಧ್ಯಯನ ಅಭ್ಯಾಸ - ಆರೋಗ್ಯ | * ಉತ್ತಮ ಆರೋಗ್ಯಕ್ಕಾಗಿ ವ್ಯಯಕ್ತಿಕ ಸ್ವಚ್ಛತೆಯ ಅವಶ್ಯಕತೆಯನ್ನು ಅರಿಯುವರು. | ಶಾಲಾ ಪ್ರಾಂಗಣ | ಶಿಕ್ಷಕ | **<u>ಪೂರ್ವ ಸಿದ್ಧತಾ ಚಟುವಟಿಕೆ :</u>**<br>ಬೇಕೇ ಬೇಕು ತರಕಾರಿ ತರಹೇವಾರಿ ತರಕಾರಿ<br>ಬೆರಳನು ಹೋಲುವ ಬೆಂಡೇಕಾಯಿ<br>ಹಾವನು ಹೋಲುವ ಪಡವಲಕಾಯಿ<br>ಕೋಲನು ಹೋಲುವ ನುಗ್ಗೇಕಾಯಿ<br>ಗೋಳಾಕಾರದ ನಿಂಬೇಕಾಯಿ<br>ಅಭಿನಯ ಗೀತೆಯನ್ನು ಸಾಮೂಹಿಕವಾಗಿ ಹಾಡಿಸುವರು. | ಪರಿಸರ ಅಧ್ಯಯನ ನಮ್ಮ ಆಹಾರ | * ಸ್ಥಳೀಯವಾಗಿ ದೊರೆಯುವ ಆಹಾರ ವಸ್ತುಗಳನ್ನು ಗುರ್ತಿಸುವರು ಮತ್ತು ಅವುಗಳನ್ನು ವರ್ಗೀಕರಿಸುವರು.<br>* ವಿವಿಧ ಬಗೆಯ ಆಹಾರಗಳ ಅವಶ್ಯಕತೆಯನ್ನು ತಿಳಿಯುವರು. | ಪಟ್ಟಿ ಮಾಡುವ ಹಾಳೆಗಳು, ಪಟ್ಟಿ ಮಾಡುವ ಕಾರ್ಡುಗಳು | ಶಿಕ್ಷಕ | **<u>ಪೂರ್ವ ಸಿದ್ಧತಾ ಚಟುವಟಿಕೆ :</u>**<br>ಅಭಿನಯ ಗೀತೆಯನ್ನು ಸಾಮೂಹಿಕವಾಗಿ ಹೇಳಿಕೊಡುವರು. |
| | 5 ನಿ | | | | | ಮುಂದಿನ ಪಾಠಕ್ಕೆ ಸಿದ್ಧತೆ ಮಾಡಿಕೊಡುವುದು. | | | | | ಮುಂದಿನ ಚಟುವಟಿಕೆಗೆ ಸೂಚನೆ ನೀಡುವರು. |
| | 25 ನಿ | | | | ಶಿಕ್ಷಕ | **<u>ಕಲಿಕಾಂಶ ಚಟುವಟಿಕೆ :</u>** ತಿಮ್ಮ ಹೇಳಿಸಿ ಚಟುವಟಿಕೆಯನ್ನು ಮಾಡಿಸಿ, ಮಕ್ಕಳ ಸ್ವಚ್ಛತೆಯ ಬಗ್ಗೆ ಚರ್ಚಿಸುತ್ತಾ ಮಕ್ಕಳ (ಚುಕ್ಕಿ ಚಿನ್ನ ಕಾರ್ಯಕ್ರಮದ ಅನ್ವಯ ತಿಮ್ಮ ಹೇಳಿಸಿ ಹಲ್ಲುಜ್ಜಿದೆಯಾ ಇತ್ಯಾದಿ) ವ್ಯಯಕ್ತಿಕ ಸ್ವಚ್ಛತೆಯ ಬಗ್ಗೆ ಅರಿವನ್ನು ಮೂಡಿಸುವರು. | | | | ವಿದ್ಯಾರ್ಥಿ | ತಾವು ಉಪಯೋಗಿಸುವ ಆಹಾರ ಪದಾರ್ಥಗಳನ್ನು ಪಟ್ಟಿ ಮಾಡುವರು. |
| | 10 ನಿ | | | | | ಮುಂದಿನ ಚಟುವಟಿಕೆಗೆ ಸೂಚನೆ ನೀಡುವರು. | | | | | ಮುಂದಿನ ಪಾಠಕ್ಕೆ ಸಿದ್ಧತೆ ಮಾಡುವರು. |
| | 25 ನಿ | | | | ವಿದ್ಯಾರ್ಥಿ | ಸ್ವಚ್ಛತಾ ರೈಲು ಆಟ ಆಡಿಸುವರು. | | | | ಶಿಕ್ಷಕ | **<u>ಕಲಿಕಾಂಶ ಚಟುವಟಿಕೆ :</u>** ಮಕ್ಕಳು ಪಟ್ಟಿಮಾಡಿದ ಆಹಾರ ಪದಾರ್ಥಗಳಲ್ಲಿ ಸಸ್ಯ ಹಾಗೂ ಪ್ರಾಣಿಗಳಿಂದ ದೊರೆಯುವ ಆಹಾರ ಪದಾರ್ಥಗಳನ್ನು ವಿಂಗಡಿಸಿ ಪಟ್ಟಿ ಮಾಡಿಸುವರು.<br>ಚಿತ್ರಪಟದ ಸಹಾಯದಿಂದ ಶಕ್ತಿ ಹಾಗು ಬೆಳವಣಿಗೆ ಬೇಕಾದ ಆಹಾರ ಪದಾರ್ಥಗಳ ಪಟ್ಟಿ ಮಾಡಿಸುವರು. |
| | 5 ನಿ | | | | | ಆಟದಿಂದಾದ ಪ್ರಯೋಜನಗಳನ್ನು ತಿಳಿಸುವರು. | | | | | ದೇಹದ ಬೆಳವಣಿಗೆಗೆ ಬೇಕಾದಂತಹ ಆಹಾರ ಪದಾರ್ಥಗಳಾವುವು ಹೆಸರಿಸಿ. |

| ಅವಧಿ | ಸಮಯ ಹಂಚಿಕೆ | ಎರಡನೇ ತರಗತಿ | | | | | ಮೂರನೇ ತರಗತಿ | | | | |
|---|---|---|---|---|---|---|---|---|---|---|---|
| | | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸಬಹುದಾದ ಬೋಧನಾ ಕಲಿಕಾ ಸಾಮಗ್ರಿಗಳು | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸಬಹುದಾದ ಬೋಧನಾ ಕಲಿಕಾ ಸಾಮಗ್ರಿಗಳು | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| **1** | **2** | **3** | **4** | **5** | **6** | **7** | **8** | **9** | **10** | **11** | **12** |
| 1ನೇ | 10 ನಿ | ಕನ್ನಡ<br>ತಂಗಿಗೆ ನಾಮಕರಣ | * ಪರಿಚಿತ ಸನ್ನಿವೇಶದಲ್ಲಿ ಸಂಭಾಷಣೆ ಮತ್ತು ಸಂವಾದಗಳನ್ನು ಅರ್ಥಮಾಡಿಕೊಳ್ಳುವುದು.<br>* ಮಾರ್ಗದರ್ಶಿತ ಸರಳ ವಿವರಣಾತ್ಮಕ ವಾಕ್ಯಗಳನ್ನು ಬರೆಯುವುದು. | ವಾಕ್ಯಗಳ ಚಾರ್ಟು, ಧ್ವನಿಸುರುಳಿ | ಶಿಕ್ಷಕ | **ಪೂರ್ವ ಸಿದ್ಧತಾ ಚಟುವಟಿಕೆ :** "ಅಂಚೆಪತ್ರ" ಹಾಡನ್ನು ಹಾಡಿಸುವರು. | ಕನ್ನಡ<br>ಅಕ್ಕನಿಗೊಂದು ಪತ್ರ | ಬೇರೆ ಮಕ್ಕಳ ಬರವಣಿಗೆಯನ್ನು ಓದುವುದು. | ಲಕೋಟೆ, ಪತ್ರ, ಕಾಡು ಇತ್ಯಾದಿ | ಶಿಕ್ಷಕ | **ಪೂರ್ವ ಸಿದ್ಧತಾ ಚಟುವಟಿಕೆ :** "ಅಂಚೆಪತ್ರ" ಹಾಡನ್ನು ಹಾಡಿಸುವರು. |
| | 5 ನಿ | | | | | ಹಲವು ವಾಕ್ಯಗಳಲ್ಲಿ ಶಿಕ್ಷಕರು ಕಪ್ಪುಹಲಗೆ ಮೇಲೆ ಅಥವಾ ಚಾರ್ಟನ್ನು ತಯಾರಿಸಿಕೊಂಡು ತರಗತಿಯಲ್ಲಿ ತೂಗುಹಾಕಿ, ಮಕ್ಕಳಿಂದ ನಕಲು ಮಾಡಲು ತಿಳಿಸುವರು. | | | | | ಮುಂದಿನ ಚಟುವಟಿಕೆಗೆ ಮಕ್ಕಳನ್ನು ಅಣಿಗೊಳಿಸುವರು. |
| | 25 ನಿ | | | | ಹಿರೇಮಣಿ | ಶಿಕ್ಷಕರ ಸೂಚನೆಯಂತೆ ಹಿರೇಮಣಿ ನೇತೃತ್ವದಲ್ಲಿ ಮಕ್ಕಳು ಕಪ್ಪುಹಲಗೆಯಲ್ಲಿ ಅಥವಾ ಶಿಕ್ಷಕರು ತೂಗು ಹಾಕಿದ ಚಾರ್ಟನ್ನು ಬರೆದ ವಾಕ್ಯಗಳನ್ನು ನಕಲು ಮಾಡಿಕೊಳ್ಳುವರು. | | | | ಶಿಕ್ಷಕ | ಪತ್ರವನ್ನು ಬರೆಯುವ ಮಾದರಿಯನ್ನು ಶಿಕ್ಷಕರು ಪತ್ರದಲ್ಲಿಯೇ ಬರೆದು ತೋರಿಸಿ, ನಂತರ ಮಕ್ಕಳಿಂದ ಪತ್ರವನ್ನು, ವಿಳಾಸ ವನ್ನು ಬರೆಯುವ ಅಭ್ಯಾಸವನ್ನು ಮಾಡಿಸುವರು. |
| | 5 ನಿ | | | | | ಮೇಲಿನ ಚಟುವಟಿಕೆಯನ್ನು ಶಿಕ್ಷಕರು ಪರಿಶೀಲಿಸುವರು. | | | | | ಮೇಲಿನ ಚಟುವಟಿಕೆ ಮುಂದುವರಿಸುವರು ಜೊತೆಗೆ ಅಭ್ಯಾಸ ಪ್ರಶ್ನೆಗಳಿಗೆ ಉತ್ತರಿಸಲು ತಿಳಿಸುವರು. |
| | 25 ನಿ | | | | ಶಿಕ್ಷಕ | **ಕಲಿಕಾಂಶ ಚಟುವಟಿಕೆ :** ತಂಗಿಗೆ ನಾಮಕರಣ ಪಾಠದಲ್ಲಿ ಬರುವ ಸಂಭಾಷಣೆಯನ್ನು ಧ್ವನಿ ಏರಿಳಿತ ಹಾವ ಭಾವದಿಂದ ಶಿಕ್ಷಕರು ಹೇಳುವರು. | | | | ಹಿರೇಮಣಿ | ಹಿರೇಮಣಿ ಸಹಾಯದಿಂದ ಮೇಲಿನ ಚಟುವಟಿಕೆಯನ್ನು ಮುಂದುವರಿಸುವರು. |
| | 10 ನಿ | | | | | ಮಕ್ಕಳಿಗೆ ಪಾಠವನ್ನು ಓದಲು ಸೂಚಿಸುವರು. | | | | | ಮೇಲಿನ ಚಟುವಟಿಕೆಯನ್ನು ಪರಿಶೀಲಿಸುವರು. |
| 2ನೇ | 10 ನಿ | ಗಣಿತ ಸಂಕಲನ | * ಮೊತ್ತವು 99ಕ್ಕೆ ಮೀರದಂತೆ ಎರಡು ಅಂಕಿಗಳುಳ್ಳ ಎರಡು ಅಥವಾ ಮೂರು ಸಂಖ್ಯೆಗಳನ್ನು ದಶಕವಿಲ್ಲದ ರೀತಿಯಲ್ಲಿ ಸಂಕಲನ ಮಾಡುವುದು. | ಕಡ್ಡಿಗಳು, ರಟ್ಟುಗಳು, ಫಲಕಗಳು, ಹೂಗಳು, ದಾರ | ಶಿಕ್ಷಕ | **ಪೂರ್ವ ಸಿದ್ಧತಾ ಚಟುವಟಿಕೆ :** "ನೂರು ನೂರು ಇನ್ನೂರು ಕರುನಾಡು ನಮ್ಮ ಯ ತವರೂರು" ಪುಟಸಂಖ್ಯೆ 61ರಲ್ಲಿನ ಸಂಕಲನ ಗೀತೆಯನ್ನು ಹಾಡಿಸುವರು. | ಗಣಿತ ಸಂಕಲನ | * ಮೊತ್ತವು 999ಕ್ಕೆ ಮೀರದಂತೆ ಅಂಕಿಗಳುಳ್ಳ ಎರಡು ಅಥವಾ ಮೂರು ಸಂಖ್ಯೆಗಳನ್ನು ದಶಕವಿಲ್ಲದ ರೀತಿಯಲ್ಲಿ ಸಂಕಲನ ಮಾಡುವುದು.<br>* ನಿತ್ಯ ಜೀವನದ ಸರಳ ಸಂಕಲನದ ಸಮಸ್ಯೆಗಳನ್ನು ಬಿಡಿಸುವುದು. | ಕಡ್ಡಿಗಳು, ರಟ್ಟುಗಳು, ಫಲಕಗಳು, ಹೂಗಳು, ದಾರ | ಶಿಕ್ಷಕ | **ಪೂರ್ವ ಸಿದ್ಧತಾ ಚಟುವಟಿಕೆ :** ಎರಡನೇ ತರಗತಿಯ ಮಕ್ಕಳ ಜೊತೆಯಲ್ಲಿ ಚಟುವಟಿಕೆಗಳನ್ನು ಮಾಡಿಸುವರು. |
| | 5 ನಿ | | | | | ಮುಂದಿನ ಚಟುವಟಿಕೆಗೆ ಸೂಚನೆಗಳನ್ನು ನೀಡುವರು. | | | | | ಮುಂದಿನ ಚಟುವಟಿಕೆಗೆ ಮಕ್ಕಳನ್ನು ಅಣಿಗೊಳಿಸುವರು. |
| | 25 ನಿ | | | | ಹಿರೇಮಣಿ | **ಕಲಿಕಾಂಶ ಚಟುವಟಿಕೆ :** ಪುಟಸಂಖ್ಯೆ 66-67ರಲ್ಲಿರುವಂತೆ ಕಡ್ಡಿಗಳು ಮತ್ತು ಹೂವಿನ ಸರಗಳಿರುವ ಚಟುವಟಿಕೆಯನ್ನು ಮಾಡಿಸುವರು. | | | | ಶಿಕ್ಷಕ | **ಮೌಲ್ಯಮಾಪನ ಚಟುವಟಿಕೆ :** ಪ.ಪು. ಪುಟಸಂಖ್ಯೆ 60ರಲ್ಲಿರುವ ಚಟುವಟಿಕೆ ಇರುವ "ದಾರಿ ಯಾವುದಯ್ಯಾ"? ಚಟುವಟಿಕೆಯನ್ನು ಮಾಡಿಸುವರು. |
| | 10 ನಿ | | | | | ಮೇಲಿನ ಚಟುವಟಿಕೆಯನ್ನು ಪರಿಶೀಲಿಸುವರು. | | | | | ಮುಂದಿನ ಚಟುವಟಿಕೆಗೆ ಸೂಚನೆಗಳನ್ನು ನೀಡುವರು. |
| | 25 ನಿ | | | | ಶಿಕ್ಷಕ | **ಕಲಿಕಾಂಶ ಚಟುವಟಿಕೆ :** ಪುಟಸಂಖ್ಯೆ 66-67ರಲ್ಲಿರುವಂತೆ ಕಡ್ಡಿಗಳು ಮತ್ತು ಹೂವಿನ ಸರಗಳಿರುವ ಚಟುವಟಿಕೆಯನ್ನು ಮಾಡಿಸುವರು. | | | | ಶಿಕ್ಷಕ | ಶಿಕ್ಷಕರ ಸೂಚನೆಯಂತೆ ಪಠ್ಯಪುಸ್ತಕ ಪುಟಸಂಖ್ಯೆ 61ರಲ್ಲಿರುವ "ನನ್ನನ್ನು ಬಿಡಿಸು" ಚಟುವಟಿಕೆಯನ್ನು ಮಾಡಿಸುವರು. |
| | 5 ನಿ | | | | | ಮೇಲಿನ ಚಟುವಟಿಕೆಯನ್ನು ಮುಂದುವರಿಸುವರು. | | | | | ಮೇಲಿನ ಚಟುವಟಿಕೆಗಳನ್ನು ಪರಿಶೀಲಿಸುವರು. |

**51ನೇ ದಿನ**



| ಅವಧಿ | ಸಮಯ ನಿಮಿಷ | ಎರಡನೇ ತರಗತಿ | | | | | ಮೂರನೇ ತರಗತಿ | | | | |
|---|---|---|---|---|---|---|---|---|---|---|---|
| | | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸಬಹುದಾದ ಬೋಧನೋ ಕಲಿಕಾ ಸಾಮಗ್ರಿಗಳು | ವಿಧಾನ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸಬಹುದಾದ ಬೋಧನೋ ಕಲಿಕಾ ಸಾಮಗ್ರಿಗಳು | ವಿಧಾನ | ಕಲಿಕಾ ಪ್ರಕ್ರಿಯೆ |
| **1** | **2** | **3** | **4** | **5** | **6** | **7** | **8** | **9** | **10** | **11** | **12** |
| 3ನೇ | 40 ನಿ | ಸಾ.ಉ.ಉ.ಕಾ. ಲಲಿತ ಕಲೆ | ಮಕ್ಕಳಲ್ಲಿ ಸಂಗೀತಾಭಿರುಚಿ ಮೂಡಿಸುವುದು. | ಸೇವಾದಲ ಹಾಗೂ ದೇಶಭಕ್ತಿಗೀತೆಗಳ ಧ್ವನಿಸುರುಳಿಗಳು ಪುಸ್ತಕ | ಶಿಕ್ಷಕ | ದೇಶ ಭಕ್ತಿಗೀತೆ ಹಾಗೂ ಪಥ ಸಂಚಲನ ಗೀತೆ ಹೇಳಿಕೊಡುವರು.<br>ಮುಂದೆ ಮುಂದೆ ಸಾಗುವ<br>ಎಲ್ಲರೊಂದು ಗೂಡುವ<br>ಶಾಂತಿಯಿಂದ ಬಾಳುವ<br>ಈ ಗೀತೆಯನ್ನು ಹೇಳಿಕೊಡುವರು. | ಲಲಿತಕಲೆ | ಮಕ್ಕಳಲ್ಲಿ ಸಂಗೀತಾಭಿರುಚಿ ಮೂಡಿಸುವುದು. | ಸೇವಾದಲ ಹಾಗೂ ದೇಶಭಕ್ತಿಗೀತೆಗಳ ಧ್ವನಿಸುರುಳಿಗಳು ಪುಸ್ತಕ | ಶಿಕ್ಷಕ | ಮುಂದೆ ಮುಂದೆ ಸಾಗುವ ಎಲ್ಲರೊಂದು ಗೂಡುವ ಶಾಂತಿಯಿಂದ ಬಾಳುವ ಈ ಗೀತೆಯನ್ನು ಹೇಳಿಕೊಡುವರು. |
| | 40 ನಿ | ಚಿನ್ನರ ಚುಕ್ಕಿ | | ರೇಡಿಯೋ, ಕಪ್ಪುಹಲಗೆ, ಸೀಮೆಸುಣ್ಣ | ಶಿಕ್ಷಕ | ಚಿನ್ನರ ಚುಕ್ಕಿ ರೇಡಿಯೋ ಕಾರ್ಯಕ್ರಮ. | ಚಿನ್ನರ ಚುಕ್ಕಿ | | ರೇಡಿಯೋ, ಕಪ್ಪುಹಲಗೆ, ಸೀಮೆಸುಣ್ಣ | ಶಿಕ್ಷಕ | ಚಿನ್ನರ ಚುಕ್ಕಿ ರೇಡಿಯೋ ಕಾರ್ಯಕ್ರಮ. |
| 4ನೇ | 10 ನಿ | ಪರಿಸರ ಅಧ್ಯಯನ ಅಭ್ಯಾಸ ಆರೋಗ್ಯ | * ಉತ್ತಮ ಆರೋಗ್ಯಕ್ಕಾಗಿ ವೈಯಕ್ತಿಕ ಅವಶ್ಯಕತೆಯನ್ನು ಅರಿಯುವರು. | ಪಠ್ಯಪುಸ್ತಕ | ಶಿಕ್ಷಕ | **<u>ಪೂರ್ವ ಸಿದ್ಧತಾ ಚಟುವಟಿಕೆ :</u>**<br>ಬೇಕೇ ಬೇಕು ತರಕಾರಿ<br>ತರಹೇವಾರಿ ತರಕಾರಿ<br>ಅಭಿನಯ ಗೀತೆಯನ್ನು ಸಾಮೂಹಿಕವಾಗಿ ಹೇಳಿಸುವರು. | ಪರಿಸರ ಅಧ್ಯಯನ ನಮ್ಮ ಆಹಾರ | * ಸ್ಥಳೀಯವಾಗಿ ದೊರೆಯುವ ಆಹಾರ ಪದಾರ್ಥಗಳನ್ನು ಗುರ್ತಿಸುವರು ಮತ್ತು ಅವುಗಳನ್ನು ವರ್ಗೀಕರಿಸುವರು.<br>* ವಿವಿಧ ಬಗೆಯ ಆಹಾರಗಳ ಅವಶ್ಯಕತೆಯನ್ನು ತಿಳಿಯುವರು. | ಚಿತ್ರಪಟ, ಪಠ್ಯಪುಸ್ತಕ, ಪಟ್ಟಿ ಮಾಡಲು ಕಾರ್ಡುಗಳು | ಶಿಕ್ಷಕ | **<u>ಪೂರ್ವ ಸಿದ್ಧತಾ ಚಟುವಟಿಕೆ :</u>**<br>ಅಭಿನಯ ಗೀತೆಯನ್ನು ಸಾಮೂಹಿಕವಾಗಿ ಹೇಳಿಕೊಡುವರು. |
| | 5 ನಿ | | | | | ಮುಂದಿನ ಚಟುವಟಿಕೆಗೆ ಸೂಚನೆ ನೀಡುವರು. | | | | | ಮುಂದಿನ ಚಟುವಟಿಕೆಗೆ ಮಕ್ಕಳು ಅಣಿಯಾಗುವರು. |
| | 25 ನಿ | | | | ವಿದ್ಯಾರ್ಥಿ | ದಿನನಿತ್ಯದ ಸ್ವಚ್ಛತೆಯ ಅಭ್ಯಾಸಗಳನ್ನು ಅಭಿನಯ ಮಾಡಲು ಮಾರ್ಗ ದರ್ಶನ ನೀಡುವರು. | | | | ಶಿಕ್ಷಕ | ಹಸಿಯಾಗಿ ಮತ್ತು ಬೇಯಿಸಿ ತಿನ್ನುವ ಆಹಾರ ಪದಾರ್ಥಗಳನ್ನು ಪಟ್ಟಿ ಮಾಡಿಸುವರು. ಅವುಗಳಿಂದ ಆಗುವ ಪ್ರಯೋಜನ ಮತ್ತು ವಿಶೇಷತೆಗಳನ್ನು ತಿಳಿಸುವರು. ದೇಹವನ್ನು ರೋಗಗಳಿಂದ ರಕ್ಷಿಸುವ ಆಹಾರ ಪದಾರ್ಥಗಳನ್ನು ಪಟ್ಟಿಮಾಡಿಸುವರು. |
| | 10 ನಿ | | | | | ಮುಂದಿನ ಚಟುವಟಿಕೆಗೆ ಸಿದ್ಧತೆ ಮಾಡಿಕೊಳ್ಳುವರು. | | | | | ಮುಂದಿನ ಚಟುವಟಿಕೆಗೆ ಸೂಚನೆ ನೀಡುವರು. |
| | 25 ನಿ | | | | ಶಿಕ್ಷಕ | ಸ್ವಚ್ಛತೆಯಿಂದ ಮಾತ್ರ ಆರೋಗ್ಯ ಕಾಪಾಡಲು ಸಾಧ್ಯ. ಸ್ವಚ್ಛತೆಯ ವಿವಿಧ ವಿಧಾನಗಳನ್ನು ಚರ್ಚಿಸುವರು. (ಪು.ಸಂ. 40) | | | | ವಿದ್ಯಾರ್ಥಿ | ನೀರಿನ ಉಪಯೋಗಗಳನ್ನು ಗುಂಪಿನಲ್ಲಿ ಚರ್ಚಿಸಿ ಪಟ್ಟಿಮಾಡುವರು. |
| | 5 ನಿ | | | | | ಮನೆಯ ಸುತ್ತ ಮುತ್ತ ಕಸ ಇದ್ದರೆ ನೀನೇನು ಮಾಡುವೆ ಎಂಬುದರ ಬಗ್ಗೆ ಚರ್ಚಿಸುವರು. | | | | | ಇಂದು ಸೇವಿಸಿದ ಆಹಾರ ಪದಾರ್ಥಗಳನ್ನು ಪಟ್ಟಿ ಮಾಡುವಂತೆ ತಿಳಿಸುವರು. |

| ಅವಧಿ | ಸಮಯ ಹಂಚಿಕೆ | ಎರಡನೇ ತರಗತಿ | | | | | ಮೂರನೇ ತರಗತಿ | | | | |
|---|---|---|---|---|---|---|---|---|---|---|---|
| | | ವಿಷಯ ಮತ್ತು ಘಟಕದ ಹೆಸರು | ಸಾಮರ್ಥ್ಯದ ವಿವರ | ಬಳಸಬಹುದಾದ ಬೋಧನಾ ಕಲಿಕಾ ಸಾಮಗ್ರಿಗಳು | ವಿಧಾನ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಘಟಕದ ಹೆಸರು | ಸಾಮರ್ಥ್ಯದ ವಿವರ | ಬಳಸಬಹುದಾದ ಬೋಧನಾ ಕಲಿಕಾ ಸಾಮಗ್ರಿಗಳು | ವಿಧಾನ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 1ನೇ | 10 ನಿ | ಕನ್ನಡ ತಂಗಿಗೆ ನಾಮಕರಣ | ಪರಿಚಿತ ಸನ್ನಿವೇಶಗಳಲ್ಲಿ ಸಂಭಾಷಣೆ ಮತ್ತು ಸಂವಾದಗಳನ್ನು ಅರ್ಥಮಾಡಿ ಮಾರ್ಗದರ್ಶಿತ ಸರಳ ವಿವರಣಾತ್ಮಕ ವಾಕ್ಯಗಳನ್ನು ಬರೆಯುವುದು. | ಪಠ್ಯಪುಸ್ತಕ | ಶಿಕ್ಷಕ | **ಪೂರ್ವ ಸಿದ್ಧತಾ ಚಟುವಟಿಕೆ :** ನೀತಿ ಕಥೆಯನ್ನು ಹೇಳುವರು. | ಕನ್ನಡ ಅಕ್ಕನಿಗೊಂದು ಪತ್ರ | ಪತ್ರ ಮತ್ತು ಬರವಣಿಗೆಯನ್ನು ಓದುವುದು. | ಅಂಚೆ ಚೀಟಿಗಳು, ಮಾದರಿ ವಾಕ್ಯಗಳು | ಶಿಕ್ಷಕ | **ಪೂರ್ವ ಸಿದ್ಧತಾ ಚಟುವಟಿಕೆ :** ನೀತಿ ಕಥೆಯನ್ನು ಹೇಳುವರು. |
| | 10 ನಿ | | | | | ನೇರಬೋಧನೆಗೆ ಅಣಿಗೊಳ್ಳಲು ಸೂಚಿಸುವರು. | | | | | ಭಾಷಾಭ್ಯಾಸ ಚಟುವಟಿಕೆಯನ್ನು ಮಾಡಲು ತಿಳಿಸುವರು. (ಸೂಚನೆಗಳನ್ನು ಕೊಟ್ಟು) |
| | 20 ನಿ | | | | ಶಿಕ್ಷಕ | **ಕಲಿಕಾಂಶ ಚಟುವಟಿಕೆ :** ತಂಗಿಗೆ ನಾಮಕರಣ ಪಾಠದಲ್ಲಿ ಬರುವ ಪಾತ್ರಗಳನ್ನು ಹಂಚಿ ಸಂಭಾಷಣೆಯನ್ನು ನಡೆಸುವಂತೆ ಶಿಕ್ಷಕರು ಮಾರ್ಗದರ್ಶನ ನೀಡುವರು. | | | | ಹಿರೇಮಣಿ | ಹಿರೇಮಣಿ ಸಹಾಯದಿಂದ ಮೇಲಿನ ಚಟುವಟಿಕೆಯನ್ನು ಮಾಡಿಸುವರು. |
| | 10 ನಿ | | | | | ಪಾಠದಲ್ಲಿ ಬರುವ ಸರಳವಾಕ್ಯಗಳನ್ನು ಬರೆಯಲು ಸೂಚನೆ ನೀಡುವರು. | | | | | ಮೇಲಿನ ಚಟುವಟಿಕೆಯನ್ನು ಪರಿಶೀಲಿಸುವರು. |
| | 25 ನಿ | | | | ಹಿರೇಮಣಿ | ಶಿಕ್ಷಕರ ಸೂಚನೆಯಂತೆ ಹೀರೇಮಣಿ ನೇತೃತ್ವದಲ್ಲಿ ಮಕ್ಕಳು ಪಾಠದಲ್ಲಿ ಬರುವ ಸರಳ ವಾಕ್ಯಗಳನ್ನು ಬರೆದುಕೊಳ್ಳುವರು. | | | | ಶಿಕ್ಷಕ | **ಪುನರ್ಬಲನ ಚಟುವಟಿಕೆ :** ವಿವಿಧ ರೀತಿಯ ಅಂಚೆ ಚೀಟಿಗಳನ್ನು ತೋರಿಸಿ ಸಂಗ್ರಹಿಸಲು ತಿಳಿಸುವರು ಮತ್ತು ಸರಳವಾಕ್ಯಗಳನ್ನು ಕರಿಹಲಗೆಯ ಮೇಲೆ ಬರೆದು ಮಕ್ಕಳಿಂದ ಓದಿಸುವರು. |
| | 5 ನಿ | | | | | ಮೇಲಿನ ಚಟುವಟಿಕೆಯನ್ನು ಪರಿಶೀಲಿಸುವರು. | | | | | ಮೇಲಿನ ಚಟುವಟಿಕೆಯನ್ನು ಮುಂದುವರಿಸುವರು. |
| 2ನೇ | 10 ನಿ | ಗಣಿತ ಸಂಕಲನ | * ಮೊತ್ತವು 99ಕ್ಕೆ ಮೀರದಂತೆ ಎರಡು ಅಂಕಿಗಳುಳ್ಳ ಎರಡು ಅಥವಾ ಮೂರು ಸಂಖ್ಯೆಗಳನ್ನು ದಶಕವಿಲ್ಲದ ರೀತಿಯಲ್ಲಿ ಸಂಕಲನ ಮಾಡುವುದು. | ಕಡ್ಡಿಗಳು, ರಬ್ಬರುಗಳು, ಫಲಕಗಳು, ಹೂಗಳು, ದಾರ, ಚಾಕಲೇಟ್‌ಗಳು, ಮಣಿಗಳು, ಗೋಲಿಗಳು, ಖಾಲಿ ಬೆಂಕಿಪೊಟ್ಟಣಗಳು. | ಶಿಕ್ಷಕ | **ಪೂರ್ವ ಸಿದ್ಧತಾ ಚಟುವಟಿಕೆ :** "ನೂರು ನೂರು ಇನ್ನೂರು" ಸಂಕಲನ ಗೀತೆಯನ್ನು ಹಾಡಿಸುವರು. | ಗಣಿತ ಸಂಕಲನ | *ಮೊತ್ತವು 999ಕ್ಕೆ ಮೀರದಂತೆ ಹಾಗೂ ದಶಕರಹಿತ ಹಾಗೂ ಮೂರು ಅಂಕಿಗಳುಳ್ಳ ಅಥವಾ ಮೂರು ಸಂಖ್ಯೆಗಳ ಸಂಕಲನ ಮಾಡುವುದು. *ನಿತ್ಯ ಜೀವನದ ಸರಳ ಸಂಕಲನದ ಸಮಸ್ಯೆಗಳನ್ನು ಬಿಡಿಸುವುದು. | ಕಡ್ಡಿಗಳು, ಗೋಲಿಗಳು, ಕ.ಹಲಗೆ, ಸಂಖ್ಯಾಫಲಕಗಳು. | ಶಿಕ್ಷಕ | **ಪೂರ್ವ ಸಿದ್ಧತಾ ಚಟುವಟಿಕೆ :** ಎರಡನೆಯ ತರಗತಿಯ ಮಕ್ಕಳ ಜೊತೆಯಲ್ಲಿಯೇ ಚಟುವಟಿಕೆಯಲ್ಲಿ ತೊಡಗಿಸುವರು. |
| | 30 ನಿ | | | | ಶಿಕ್ಷಕ | **ಕಲಿಕಾಂಶ ಚಟುವಟಿಕೆ :** ಸಂಖ್ಯಾಕಾರ್ಡ್‌ಗಳನ್ನು ರಾಶಿ ಹಾಕುವುದು. ಪ್ರತಿ ಮಗುವು ಎರಡು ಸಂಖ್ಯಾ ಕಾರ್ಡ್‌ಗಳನ್ನು ತೆಗೆದುಕೊಂಡು ಸಂಖ್ಯಾಕಾರ್ಡ್‌ಗಳಲ್ಲಿರುವ ಸಂಖ್ಯೆಗಳ ಮೊತ್ತವನ್ನು ಕಂಡುಹಿಡಿಯುವ ಚಟುವಟಿಕೆ ಮಾಡಿಸುವರು. | | | | ಶಿಕ್ಷಕ | ಸಂಖ್ಯಾ ಕಾರ್ಡ್‌ಗಳನ್ನು ರಾಶಿ ಹಾಕುವುದು. ಪ್ರತಿ ಮಗುವು ಎರಡು ಸಂಖ್ಯಾಕಾರ್ಡ್‌ಗಳನ್ನು ತೆಗೆದುಕೊಂಡು ಸಂಖ್ಯಾಕಾರ್ಡ್‌ಗಳಲ್ಲಿರುವ ಸಂಖ್ಯಾಗಳ ಮೊತ್ತವನ್ನು ಕಂಡು ಹಿಡಿಯುವ ಚಟುವಟಿಕೆ ಮಾಡಿಸುವರು. |
| | 40 ನಿ | ಜೀವನ ಮೌಲ್ಯ | ಮೌಲ್ಯ ವಿಕಸನ ಬೆಳೆಸುವುದು. | | | ಮಕ್ಕಳಿಂದ ಕಥೆ ಹೇಳಿಸುವರು ಹಾಗೂ ದೇಶಭಕ್ತಿಗೀತೆ ಹಾಡಿಸುವರು. | | | | | ಮಕ್ಕಳಿಂದ ಕಥೆ ಹೇಳಿಸುವರು ಹಾಗೂ ದೇಶಭಕ್ತಿಗೀತೆ ಹಾಡಿಸುವರು. |

| ಅವಧಿ | ಸಮಯ ಹಂಚಿಕೆ | ಎರಡನೇ ತರಗತಿ | | | | | ಮೂರನೇ ತರಗತಿ | | | | |
|---|---|---|---|---|---|---|---|---|---|---|---|
| | | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸಬಹುದಾದ ಬೋಧನಾ ಕಲಿಕಾ ಸಾಮಗ್ರಿಗಳು | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸಬಹುದಾದ ಬೋಧನಾ ಕಲಿಕಾ ಸಾಮಗ್ರಿಗಳು | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| **1** | **2** | **3** | **4** | **5** | **6** | **7** | **8** | **9** | **10** | **11** | **12** |
| 3ನೇ | 40 ನಿಮಿಷ | ಜೀವನ ವಿಜ್ಞಾನ | ಶಾರೀರಿಕ ಶಿಕ್ಷಣ ಬೆಳೆಸುವುದು. | | ಶಿಕ್ಷಕ | 2ನೇ ತರಗತಿಯ ಮಕ್ಕಳು ಮೂರನೇ ತರಗತಿಯ ಮಕ್ಕಳು ಮಾಡುವ ಚಟುವಟಿಕೆಗಳನ್ನು ವೀಕ್ಷಿಸುವರು. | ಜೀವನ ಶಿಕ್ಷಣ | ಮಕ್ಕಳಲ್ಲಿ ಶಾರೀರಿಕ ಶಿಕ್ಷಣ ಬೆಳೆಸುವರು | | ಶಿಕ್ಷಕ | ಕಳೆದ ತರಗತಿಯಲ್ಲಿ ಪ್ರಕಾರ 1ರ ಸಾಮೂಹಿಕ ಕವಾಯತನ್ನು ಮಾಡಿಸುವರು. ಈ ಅವಧಿಯಲ್ಲಿ ಅದೇ ಚಟುವಟಿಕೆಯನ್ನು ಪುನರಾವರ್ತನೆ ಮಾಡಿಸುವುದು. <u>**ಸೂಚನೆ :**</u> ಕವಾಯತಿಗೆ ಮುನ್ನ ಮಕ್ಕಳನ್ನು ಎತ್ತರಕ್ಕೆ ಅನುಗುಣವಾಗಿ ನಿಲ್ಲಿಸಿಕೊಳ್ಳಬೇಕು. |
| | ನಂತರದ 40 ನಿಮಿಷ | ಚಿನ್ನರ ಚುಕ್ಕಿ | | ರೇಡಿಯೋ, ಕ್ಯಾಸೆಟ್‌ಗಳು ಸಿಡಿ | | ಚಿನ್ನರ ಚುಕ್ಕಿ ರೇಡಿಯೋ ಕಾರ್ಯಕ್ರಮ. | ಚಿನ್ನರ ಚುಕ್ಕಿ | | ರೇಡಿಯೋ ಕ್ಯಾಸೆಟ್‌ಗಳು ಸಿಡಿ | ಶಿಕ್ಷಕ | ಚಿನ್ನರ ಚುಕ್ಕಿ ರೇಡಿಯೋ ಕಾರ್ಯಕ್ರಮ. |
| 4ನೇ | 10 ನಿ | ಜೀವನ ಶಿಕ್ಷಣ ಆಹಾರ ಆರೋಗ್ಯ | * ಉತ್ತಮ ಆರೋಗ್ಯಕ್ಕಾಗಿ ವೈಯಕ್ತಿಕ ಸ್ವಚ್ಛತೆಯ ಅವಶ್ಯಕತೆಯನ್ನು ಅರಿಯುವರು. | ಆಟದ ಸಾಮಗ್ರಿ, ಪುಸ್ತಕ | ಶಿಕ್ಷಕ | <u>**ಪೂರ್ವ ಸಿದ್ಧತಾ ಚಟುವಟಿಕೆ :**</u><br>ಸೊಪ್ಪು, ಟಮೋಟ, ತರಕಾರಿ ಮಾರುವ ಆಟ ಆಡಿಸುವರು. (ಆಡೋಣ ಬಾ ಪುಸ್ತಕದಿಂದ ಆಯ್ದಿದೆ) | ನಮ್ಮ ಆಹಾರ | * ಸ್ಥಳೀಯವಾಗಿ ದೊರೆಯುವ ಆಹಾರ ಪದಾರ್ಥಗಳನ್ನು ಗುರುತಿಸುವರು ಮತ್ತು ಅವುಗಳನ್ನು ವರ್ಗೀಕರಿಸುವರು.<br>* ವಿವಿಧ ಬಗೆಯ ಆಹಾರಗಳ ಅವಶ್ಯಕತೆಯನ್ನು ತಿಳಿಯುವರು. | ಪುಸ್ತಕ | ಶಿಕ್ಷಕ | <u>**ಪೂರ್ವ ಸಿದ್ಧತಾ ಚಟುವಟಿಕೆ :**</u><br>2ನೇ ತರಗತಿಯ ಮಕ್ಕಳ ಜೊತೆಯಲ್ಲಿ 3ನೇ ತರಗತಿಯ ಮಕ್ಕಳನ್ನು ಚಟುವಟಿಕೆಯಲ್ಲಿ ತೊಡಗಿಸುವರು. |
| | 5 ನಿ | | | | | ಸ್ವಚ್ಛತಾ ರೈಲು ಆಟ ಆಡಿಸಲು ಹಿರೇಮಣಿಗೆ ಸೂಚಿಸುವರು. | | | | | ಮುಂದಿನ ಪಾಠಕ್ಕೆ ಮಕ್ಕಳನ್ನು ಸಿದ್ಧಗೊಳಿಸುವರು. |
| | 25 ನಿ | | | | ವಿದ್ಯಾರ್ಥಿ | ಹಿರೇಮಣಿಯು ಸ್ವಚ್ಛತಾ - ರೈಲು ಆಟ ಆಡಿಸುವನು. | | | | ಶಿಕ್ಷಕ | ನಾವು ಕುಡಿಯುವ ನೀರು ಶುದ್ಧವಾಗಿರಬೇಕು. ಬೇರೆ ಆಹಾರದಷ್ಟೇ ನೀರು ಪ್ರಮುಖವಾದದ್ದು. ನಾವು ಸೇವಿಸುವ ಆಹಾರದ ಸುರಕ್ಷತೆಯ ಬಗ್ಗೆ, ಸಂರಕ್ಷತೆಯ ವಿಧಾನಗಳ ಬಗ್ಗೆ ಚರ್ಚಿಸುವರು. |
| | 10 ನಿ | | | | | ಮುಂದಿನ ಪಾಠಕ್ಕೆ ಮಕ್ಕಳನ್ನು ಸಿದ್ಧಗೊಳಿಸುವರು. | | | | | ಮುಂದಿನ ಚಟುವಟಿಕೆಗೆ ಸೂಚನೆ ನೀಡುವರು. |
| | 25 ನಿ | | | | ಶಿಕ್ಷಕ | <u>**ಪುನರ್ಬಲನ ಚಟುವಟಿಕೆ :**</u> ಪು.ಸಂ. 41ರಲ್ಲಿರುವ ತಿಳಿ ಕಲಿ ವಿಭಾಗದಲ್ಲಿ ಈ ಪ್ರಶ್ನೆಗಳಿಗೆ ನೀನೇ ಉತ್ತರಿಸಿಕೋ? ವಿಭಾಗದ ಪ್ರಶ್ನೆಗಳಿಗೆ ಉತ್ತರಿಸಲು ತಿಳಿಸಿ ಮಾಹಿತಿ ನೀಡಿ ಉತ್ತರಿಸಲು ಸಹಾಯ ಮಾಡುವರು. | | | | ವಿದ್ಯಾರ್ಥಿ | ಏಕದಳ ಮತ್ತು ದ್ವಿದಳ ಧಾನ್ಯಗಳನ್ನು ಕಾರ್ಡಿನಲ್ಲಿ ಅಂಟಿಸಿ ಹೆಸರಿಸುವರು. |
| | 5 ನಿ | | | | | ದೇಹದ ಸ್ವಚ್ಛತೆಗೆ ಸಾಬೂನು ಉಪಯೋಗಿಸಬೇಕು ಏಕೆ?<br>ಈ ಪ್ರಶ್ನೆಗೆ ಉತ್ತರಿಸಲು ತಿಳಿಸುವರು. | | | | | ಚಟುವಟಿಕೆಯ ಪರಿಶೀಲನೆ ಮಾಡುವರು. |

**53ನೇ ದಿನ**



| ಅವಧಿ | ಸಮಯ ಹಂಚಿಕೆ | ಎರಡನೇ ತರಗತಿ | | | | | ಮೂರನೇ ತರಗತಿ | | | | |
|---|---|---|---|---|---|---|---|---|---|---|---|
| | | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬೋಧನೋಪಕರಣ/ ಬೋಧನಾ ಕಲಿಕಾ ಸಾಮಗ್ರಿಗಳು | ವಿಧಾನ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬೋಧನೋಪಕರಣ/ ಬೋಧನಾ ಕಲಿಕಾ ಸಾಮಗ್ರಿಗಳು | ವಿಧಾನ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 1ನೇ | 10 ನಿ | ಕನ್ನಡ<br>ತಂಗಿಗೆ ನಾಮಕರಣ | * ಪರಿಚಿತ ಸನ್ನಿವೇಶಗಳಲ್ಲಿ ಸಂಭಾಷಣೆ ಮತ್ತು ಸಂವಾದಗಳನ್ನು ಅರ್ಥ ಮಾಡಿಕೊಳ್ಳುವರು. | ಸಂಭಾಷಣೆಯ ಧ್ವನಿ ಸುರುಳಿ | ಸಾಮೂಹಿಕ | **<u>ಪೂರ್ವ ಸಿದ್ಧತಾ ಚಟುವಟಿಕೆ :</u>** ಸ್ಥಳೀಯವಾಗಿ ಸಿಗುವ ಕಥೆಯನ್ನು ಹೇಳುವರು. | ಕನ್ನಡ<br>ಅಕ್ಕನಿಗೊಂದು ಪತ್ರ | ಪತ್ರ ಮತ್ತು ಬರವಣಿಗೆಯನ್ನು ಓದುವರು. | | ಸಾಮೂಹಿಕ | **<u>ಪೂರ್ವ ಸಿದ್ಧತಾ ಚಟುವಟಿಕೆ :</u>** ಸ್ಥಳೀಯವಾಗಿ ಸಿಗುವ ಕಥೆಯನ್ನು ಹೇಳುವರು. |
| | 5 ನಿ | | | | | ನೇರಬೋಧನೆಗೆ ಮಕ್ಕಳು ಅಣಿಯಾಗುವರು. | | | | | ಮಕ್ಕಳು ತಾವೇ ವಿಳಾಸ ಸಹಿತ ಪತ್ರವನ್ನು ಬರೆಯಲು ಸೂಚಿಸುವರು. |
| | 25 ನಿ | | | | ಸಾಮೂಹಿಕ | **<u>ಕಲಿಕಾಂಶ ಚಟುವಟಿಕೆ :</u>** ಸಂಭಾಷಣೆ ಇರುವ ಧ್ವನಿ ಸುರುಳಿಗಳನ್ನು ಹಾಕಿ ಮಕ್ಕಳು ಆಲಿಸುವಂತೆ ಮಾಡುವುದು ಮತ್ತು ಸಂಭಾಷಣೆಯನ್ನು ಕರಿಹಲಗೆಯಲ್ಲಿ ಶಿಕ್ಷಕರು ಬರೆಯುವರು ಮಕ್ಕಳಿಂದ ಬರೆಸುವರು. | | | | ಸ್ವಯಂ ಕಲಿಕೆ | ಮಕ್ಕಳು ಮೇಲಿನ ಚಟುವಟಿಕೆಯನ್ನು ಮಾಡುವರು. |
| | 5 ನಿ | | | | | ಶಿಕ್ಷಕರ ಸೂಚನೆಯಂತೆ ಹಿರೇಮಣಿಯು ಕರಿಹಲಗೆಯಲ್ಲಿ ಬರೆದ ಸಂಭಾಷಣೆಯನ್ನು ಬರೆದುಕೊಳ್ಳಲು ಮಕ್ಕಳಿಗೆ ಸೂಚನೆ ನೀಡುವರು. | | | | | ಮೇಲಿನ ಚಟುವಟಿಕೆಯನ್ನು ಪರಿಶೀಲಿಸುವರು. |
